

ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು

# ಮಾಲಿಕರು ಹಾಗು ಆಕ್ರಮಣಕಾರಿಗಳು

ವಿದ್ಯಾ ಮತ್ತು ರಾಜಾರಾಮ್ ಶರ್ಮ
ಅನುವಾದ: ಅಂಬಿಕ ಆರ್

ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು

# ಮಾಲಿಕರು ಹಾಗು ಆಕ್ರಮಣಕಾರಿಗಳು

ವಿದ್ಯಾ ಮತ್ತು ರಾಜಾರಾಮ್ ಶರ್ಮ
ಅನುವಾದ: ಅಂಬಿಕ ಆರ್

Vidya Online
A PARTNERSHIP FOR TEACHERS, CHILDREN AND EDUCATION



ಈ ಕಥೆ, ದಕ್ಷಿಣ ದೆಹಲಿಯಲ್ಲಿರುವ ಸಂಸ್ಥೆಗಳ ಆವರಣಗಳಲ್ಲಿ 2010ರ ಮೇ ಮತ್ತು ಜೂನ್ ತಿಂಗಳುಗಳ ನಡುವೆ ನಡೆಸಿದ ಅವಲೋಕನೆಗಳನ್ನು ಆಧರಿಸಿದೆ.

ಈ ಪುಸ್ತಕದಲ್ಲಿ ಇರುವ ಚಿತ್ರಗಳು, ಪಕ್ಷಿಯ ಅಥವ ಗೂಡುಗಳ ನಿಜವಾದ ಗಾತ್ರವನ್ನು ತೋರಿಸದೇ ಇರಬಹುದು.

MALIKARU HAGU AKRAMANAKARIGALU the downloadable e-book available at https://www.vidyaonline.net and published by VIDYA ONLINE is licensed under a Creative Commons Attribution-NonCommercial-ShareAlike 4.0 Unported License (https://creativecommons.org/licenses/by-nc-sa/4.0/)

Permissions beyond the scope of this license may be available at admin@vidyaonline.org

ನಾನು ಆಶ್ಚರ್ಯದಿಂದ ಬಾಯಿ ಬಿಟ್ಟುಕೊಂಡು ನಿಂತು ಬಿಟ್ಟೆ. ವಿಚಿತ್ರವಾದ ಕೊಕ್ಕಿನ ಒಂದು ದೊಡ್ಡ ಬೂದು ಬಣ್ಣದ ಹಕ್ಕಿ ಮರದ ಪೊಟರೆಯೊಳಗೆ ಕಷ್ಟಪಟ್ಟು ಎಲೆಗಳನ್ನು ತುಂಬುತ್ತಿತ್ತು. ಒಂದು ಎಲೆಯಾದ ನಂತರ ಇನ್ನೊಂದು. ಕೆಲವು ಹಣ್ಣುಗಳನ್ನೂ ಒಳಗೆ ಹಾಕಿತು. ಆ ಹಕ್ಕಿ ತಲೆ ಹಿಂದೆ ಹಾಕಿ ಅಲ್ಲಾಡಿಸಿದಾಗ, ಕೊಕ್ಕಿನ ತುದಿಗೆ ಹೇಗೋ ಎಲೆಗಳು ಹಣ್ಣುಗಳು ಬರುತ್ತಿದ್ದವು. ಇವೆಲ್ಲವೂ ಎಲ್ಲಿತ್ತೋ ಏನೋ?





ಸುಮಾರು ಐದು ನಿಮಿಷಗಳವರೆಗೆ ಅದು ಹೀಗೆ ಮಾಡುತ್ತಿತ್ತು. ನಂತರ ಕೊಕ್ಕನ್ನು ಮರಕ್ಕೆ ಉಜ್ಜಿ ಒರೆಸಿಕೊಂಡು ಹಕ್ಕಿ ಹಾರಿಹೋಯಿತು.

ಆ ಪೊಟರೆ ಮರದ ಮೇಲ್ಭಾಗದಲ್ಲಿ ಇದ್ದಿದ್ದರಿಂದ ನನಗೆ ಏನೂ ಸರಿಯಾಗಿ ಕಾಣುತ್ತಿರಲಿಲ್ಲ. ನಾನು ಅಳಿಲುಗಳು ಕಾಯಿಗಳನ್ನು ಮರದ ಪೊಟರೆಯಲ್ಲಿ ಬಚ್ಚಿಡುತ್ತವೆ ಎಂದು ಕೇಳಿದ್ದೆ. ಈ ಹಕ್ಕಿಯೂ ಅದೇ ರೀತಿ ಮಾಡುತ್ತಿರಬಹುದೇ?

ಆ ಹಕ್ಕಿ ಹಿಂದಿರುಗಿ ಬರುವುದನ್ನೇ ಕಾಯುತ್ತಾ ಪಕ್ಕದ ಮರಕ್ಕೆ ಒರಗಿದೆ. ಈ ಸಲ ನಾನು ಬೆಚ್ಚಿಬಿದ್ದೆ.

ನಾನು ಒರಗಿದ ಮರದ ಒಳಗಿನಿಂದ ವಿಚಿತ್ರ ಶಬ್ದ ಬರುತ್ತಿತ್ತು. ಅದು ಗಂಟಲಿನಲ್ಲಿ ನೀರು ಹಾಕಿ ಮುಕ್ಕಳಿಸುವ ರೀತಿಯ ಶಬ್ದ. ಆ ಶಬ್ದ ನಿರಂತರವಾಗಿ ಬರುತ್ತಿತ್ತು.

"ಇನ್ನೊಂದು ಪೊಟರೆ!" ನಾನು ಕೂಗಿದೆ, ಹಿಂತಿರುಗಿ. ಕಾಲ ತುದಿಯ ಮೇಲೆ ನಿಂತು ಬಗ್ಗಿ, ಪೊಟರೆ ಒಳಗೆ ನೋಡ ಬಹುದಾಗಿತ್ತು. ಆದರೆ ಒಳಗೆ ಏನೂ ಕಾಣುತ್ತಿರಲಿಲ್ಲ. ಆ ಶಬ್ದವು ಅದರೊಳಗಿನಿಂದ ಬರುತ್ತಿತ್ತು. ಪೊಟರೆ ಒಳಗೆ ಏನಿರಬಹುದು ಎಂದು ನಾನು ಯೋಚಿಸುತ್ತಿರುವಾಗ, ಜೋರಾಗಿ ಬಂದ ಒಂದು ಉದ್ದವಾದ ದೊಡ್ಡ ನಗು ನನ್ನನ್ನು ಎಚ್ಚರಿಸಿತು.





ತಿರುಗಿ ನೋಡಿದಾಗ ಪಕ್ಕದ ಮರದ ಒಂದು ಪೊಟರೆ ಯಿಂದ ಚಿಕ್ಕ ತಲೆಯೊಂದು ಇಣುಕಿ ನೋಡುತ್ತಿತ್ತು. ಅತಿ ಕೆಳಭಾಗದಲ್ಲಿದ್ದ ಕೊಂಬೆಯಲ್ಲಿ ಮಾಡಿದ್ದ ಗುಂಡಗಿನ ಪೊಟರೆ, ಅದು. ಅದನ್ನು ಸರಿಯಾಗಿ ನೋಡಲು ಅದರ ಹತ್ತಿರ ಹೋದೆ.

"ಮರಕುಟಿಗ ಮರಿಗಳು!" ಅಲ್ಲಿ ಇದ್ದ ಎರಡು ಮರಿಗಳನ್ನು ನೋಡಿ ಕೂಗಿದೆ.

"ಇವು ಈಗ ಚಿಕ್ಕ ಮರಿಗಳೇನಲ್ಲ," ಅಮ್ಮ ಮರಕುಟಿಗ ಮರದ ತೊಗಟೆಗೆ ಕಚ್ಚಿಕೊಂಡಂತೆ ಕುಳಿತು ಹೆಮ್ಮೆಯಿಂದ ಹೇಳಿತು.

“ಹಾಗಂದರೆ?” ನಾನು ಕೇಳಿದೆ.

“ಇವು ಮರಿಗಳಲ್ಲ, ಹೆಚ್ಚು ಕಡಿಮೆ ಎಳೆಯ ಹಕ್ಕಿಗಳು! ಗೂಡನ್ನು ಬಿಟ್ಟು ಹೋಗಿ ತಮ್ಮನ್ನು ತಾವೇ ನೋಡಿಕೊಳ್ಳಲು ತಯಾರಾಗಿವೆ,” ಅಮ್ಮ ಹಕ್ಕಿ, ನಗುತ್ತಾ ಹೇಳಿತು.

ಮರಿಗಳು ಒಂದರ ನಂತರ ಒಂದು ಹೊರಗೆ ಇಣುಕಿ ನೋಡುತ್ತಿದ್ದವು. ತಾವು ಹೋಗಲಿರುವ ಪ್ರಪಂಚವನ್ನು ಕಣ್ಣರಳಿಸಿ ನೋಡುತ್ತಿದ್ದವು.

ಇದ್ದಕ್ಕಿದ್ದಂತೆ ಒಂದು ಮರಿ ಅಲೆ ಅಲೆಯಾಗಿ ಮತ್ತೆ ನಕ್ಕಿತು.





“ಓ ಹಕ್ಕಿಗಳಿಗೆ ನಾಲಿಗೆ ಇರುತ್ತದೆ ಎಂದು ಗೊತ್ತೇ ಇರಲಿಲ್ಲ,” ಆ ಹಕ್ಕಿಮರಿಯನ್ನೂ, ಅದರ ಕೂಗನ್ನು ಮೆಚ್ಚುತ್ತಾ ಹೇಳಿದೆ.

“ಖಂಡಿತವಾಗಿಯೂ ಇರುತ್ತದೆ. ಕೆಲವು ಹಕ್ಕಿಗಳಿಗೆ ಉದ್ದವಾದ ನಾಲಿಗೆ ಇದ್ದರೆ, ಕೆಲವಕ್ಕೆ ಗಿಡ್ಡವಾಗಿ ಇರುತ್ತದೆ. ನಮ್ಮ ನಾಲಿಗೆ ಕೊಕ್ಕಿಗಿಂತಲೂ ಉದ್ದವಾಗಿದೆ. ನಾವು ಅದರಿಂದ–”

ಒಂದು ಹಸಿರು ಬಣ್ಣದ ಹಕ್ಕಿ, ಗೊರವಂಕಗಿಂತ ದೊಡ್ಡದಾಗಿದ್ದ ಹಕ್ಕಿಯು ಅದೇ ಮರದ ಮೇಲೆ ಬಂದು ಕುಳಿತುಕೊಂಡಿತು. ಅದನ್ನು ನೋಡುತ್ತಾ ವಿಚಲಿತವಾಗಿ ಮರಕುಟಿಗ ಮಾತು ನಿಲ್ಲಿಸಿತು.

ಆ ಹಸಿರು ಹಕ್ಕಿ ಕೊಕ್ಕಿನ ತುಂಬಾ ಅತ್ತಿ ಹಣ್ಣುಗಳನ್ನು ತುಂಬಿಕೊಂಡಿತ್ತು.

ಅದು ಅಲ್ಲಿ ಅತ್ತಿತ್ತ ನೋಡುತ್ತಾ ಸ್ವಲ್ಪ ಹೊತ್ತು ಕುಳಿತಿತ್ತು. ಅದಕ್ಕೆ ದೊಡ್ಡದಾದ ಕೆಂಪು ಬಣ್ಣದ ಕೊಕ್ಕು ಇತ್ತು. ಅದರ ದೇಹದ ಗಾತ್ರಕ್ಕೆ ಕೊಕ್ಕು ಸ್ವಲ್ಪ ದೊಡ್ಡದೇ ಅನಿಸುತ್ತಿತ್ತು.

ಸ್ವಲ್ಪ ಸಮಯದ ನಂತರ ಆ ಹಸಿರು ಹಕ್ಕಿ ವಿಚಿತ್ರ ಶಬ್ದ ಬರುತ್ತಿದ್ದ ಪೊಟರೆಯ ಒಳಗೆ ನುಗ್ಗಿತು. ಆಗ ಅಲ್ಲಿಯ ಶಬ್ದ ಇನ್ನೂ ಜೋರಾಯಿತು. ಕೆಲವು ನಿಮಿಷಗಳ ನಂತರ ಹಕ್ಕಿ ಕೊಕ್ಕಿನ ತುಂಬಾ ಕಸ ತುಂಬಿಕೊಂಡು ಅಲ್ಲಿಂದ ಹೊರಗೆ ಬಂತು.





“ಥೂ!  ಏನದು?” ಮುಖ ಸಿಂಡರಿಸುತ್ತಾ, ಹಕ್ಕಿಯನ್ನು ಕೇಳಿದೆ.

“ಅದು ತನ್ನ ಮರಿಗಳಿಗಾಗಿ ಮನೆ ಸ್ವಚ್ಛ ಮಾಡುತ್ತಿದೆ.” ಆ ಹಸಿರು ಹಕ್ಕಿಯ ಬದಲಾಗಿ ಮರಕುಟಿಗ ಹೇಳಿತು.

“ಮರಿಗಳೇ? ಅಲ್ಲಿ ಮರಿಗಳಿವೆಯೇ?”

“ನಿನಗೆ ಅವುಗಳ ಕೂಗು ಕೇಳಿಸಲಿಲ್ಲವೇ?” ನನ್ನ ಪೆದ್ದುತನವನ್ನು ನೋಡಿ ಆಶ್ಚರ್ಯದಿಂದ ಕೇಳಿತು ಮರಕುಟಿಗ.

“ಓ ದೇವರೇ!  ಆ ಶಬ್ದ... ಮರಿಗಳು ಆ ಶಬ್ದವನ್ನು ಮಾಡುತ್ತಿದ್ದವೇ?”

ನನಗೆ ಆಶ್ಚರ್ಯವಾಗಿತ್ತು ಹಾಗೆಯೇ ಆ ಶಬ್ದಗಳು ಏನು ಎಂದು ತಿಳಿದು ಸಮಾಧಾನವೂ ಆಗಿತ್ತು.

“ಇದು ನಮ್ಮೆಲ್ಲರ ಗೂಡು ಕಟ್ಟುವ ಕಾಲ, ನಾವೆಲ್ಲಾ ನಮ್ಮ ಮರಿಗಳನ್ನು ಬೆಳೆಸುತ್ತಿದ್ದೇವೆ.”

“ಓ... ಹಾಗಾದರೆ ಆ ದೊಡ್ಡ ಹಕ್ಕಿ... ಆ ದೊಡ್ಡ ಬೂದು ಬಣ್ಣದ ಹಕ್ಕಿಯು ತನ್ನ ಮರಿಗಳಿಗೆ ಆಹಾರ ತಿನ್ನಿಸುತ್ತಿತ್ತು.” ನಾನು ಊಹಿಸಿ ಉದ್ಗರಿಸಿದೆ.

“ಅಲ್ಲ ಅದರ ಹೆಂಡತಿಗೆ.”





ನಾನು ಸರಿಯಾಗಿ ಕೇಳಿಸಿಕೊಂಡನೆ! ಸಂಶಯದಲ್ಲಿದ್ದೆ.

"ಏನೂ-?" ನನ್ನ ಪ್ರಶ್ನೆ ಅರ್ಧದಲ್ಲೇ ನಿಂತಿತು.

ಪಕ್ಕದಲ್ಲಿ ಇದ್ದ ಗುಲ್ ಮೊಹರ್ ಮರದ ಮೇಲೆ, ಗೊರವಂಕ ಮತ್ತು ಗಿಳಿಗಳು ದೊಡ್ಡ ಜಗಳವನ್ನೇ ಶುರು ಮಾಡಿದ್ದವು. "ಏನಾಗುತ್ತಿದೆ ಅಲ್ಲಿ?" ನಾನು ಕೇಳಿದೆ.

"ಪೊಟರೆ ಜಗಳ," ಮರಕುಟಿಗ ಹೇಳಿತು.

"ಹಾಗಂದರೆ ಏನು?"

“ಗೊರವಂಕ ಹಾಗೂ ಗಿಳಿಗಳೆರಡು ಒಂದು ಪೊಟರೆಗಾಗಿ ಜಗಳ ಆಡುತ್ತಿವೆ. ಅವೆರಡೂ ಪೊಟರೆಯಲ್ಲಿ ಗೂಡು ಮಾಡುತ್ತವೆ. ಪೊಟರೆಗಳು ಯಾವಾಗಲೂ ಬೇಕಾದಷ್ಟು ಇರುವುದಿಲ್ಲ.”

“ಪೊಟರೆಗಾಗಿ ಏಕೆ ಜಗಳ ಮಾಡಬೇಕು? ಯಾರು ಅದನ್ನು ಮಾಡಿರುತ್ತಾರೋ ಅವರೇ ಅದರ ಒಡೆಯರು, ಈ ವಿಷಯ ತುಂಬಾ ಸುಲಭವಾಗಿ ನಿರ್ಧರಿಸಬಹುದು,” ನನ್ನ ಅನಿಸಿಕೆಯನ್ನು ಹೇಳಿದೆ.

“ಯಾರೂ ಒಡೆಯರಲ್ಲ, ಯಾರೂ ಮಾಲೀಕರಲ್ಲ,” ಮರಕುಟಿಗ ನೇರವಾಗಿ ಹೇಳಿತು. “ಅಲ್ಲದೆ ಪೊಟರೆ ಯಾರು ಮಾಡಿದ್ದು ಎಂದು ಯಾರಿಗೂ ನೆನಪಿರುವುದಿಲ್ಲ.”





ಪೊಟರೆಗಳ ಬಗ್ಗೆ ವಿವರವಾಗಿ ಹೇಳಲು ದಯಮಾಡಿತು ಮರಕುಟಿಗ. ಮರಗಳು ಹಳೆಯದಾದಂತೆ ಅದರ ತೊಗಟೆ ಘಾಸಿಕೊಳ್ಳುತ್ತದೆ. ಅದರ ಕೊಂಬೆಗಳನ್ನು ಜನರು ಮುರಿಯಬಹುದು ಅಥವಾ ಕೆಲವು ಸಲ ಜೋರಾದ ಮಳೆಗೆ ಮುರಿದು ಬೀಳಬಹುದು. ಆಗ; ಹುಳುಗಳು, ಪಾಚಿ, ಮಳೆ ನೀರು, ಗಾಳಿ ಎಲ್ಲವೂ ಮರದ ಒಳಗೆ ಇಳಿಯಲು ಅವಕಾಶ ಆಗುತ್ತದೆ. ಮರದ ಬೊಡ್ಡೆ ಅಥವಾ ದೊಡ್ಡ ಕೊಂಬೆಗಳ ಮಧ್ಯ ಭಾಗ, ಸತ್ತ ಜೀವಕೋಶದಿಂದ ಆಗಿರುತ್ತದೆ. ಇದನ್ನು ಚೇಗು ಎಂದು ಕರೆಯುತ್ತಾರೆ. ಇದು ನೀರು ಮತ್ತು ಪಾಚಿಯಿಂದ ಕೊಳೆಯಲು ಪ್ರಾರಂಭಿಸುತ್ತದೆ. ಆಗ ಮರದ ಒಳಭಾಗ ಟೊಳ್ಳಾಗುತ್ತದೆ.

ಆ ಸಣ್ಣ ತೋಪಿನಲ್ಲಿ ಹಲವಾರು ಮರಗಳಿದ್ದವು. ಅವೆಲ್ಲ ಹಲವಾರು

ವರ್ಷದ ಹಳೆಯ ಮರಗಳು. ಎಲ್ಲಾ ಮರಗಳಲ್ಲೂ ಈ ರೀತಿಯ ಟೊಳ್ಳುಗಳು, ಪೊಟರೆಗಳು ಇದ್ದವು.

"ಪೊಟರೆಗಳು ನೈಸರ್ಗಿಕವಾಗಿ ಆಗುತ್ತವೆ. ಅದನ್ನು ಯಾರೂ ತಮ್ಮದು ಎಂದು ಹೇಳಲು ಆಗುವುದಿಲ್ಲ," ಎಂದು ಮರಕುಟಿಗ ಹಕ್ಕಿ ಘೋಷಿಸಿತು.

"ನಿನ್ನ ಗೂಡಿನ ಬಾಯಿ ಸಮವಾಗಿ ಗುಂಡಾಗಿ ಇದೆ. ಅದು ನೈಸರ್ಗಿಕವಾಗಿ ಆದಂತೆ ಇಲ್ಲವಲ್ಲಾ?" ನಾನು ಕೇಳಿದೆ.

"ಪೊಟರೆಯ ಬಾಯಿ ನೈಸರ್ಗಿಕವಾಗಿ ಆಗಿರಬಹುದು ಅಥವಾ





ಹಕ್ಕಿಗಳೂ ಮಾಡಿರಬಹುದು. ನೀನು ಸಮವಾದ ಗುಂಡಗಿನ ಪೊಟರೆಯ ಬಾಯಿ ನೋಡಿದರೆ, ಅದನ್ನು ಮರಕುಟಿಗ ಅಥವಾ ಕುಟ್ರ ಹಕ್ಕಿ ಮಾಡಿರುತ್ತದೆ."

"ಕುಟ್ರ ಹಕ್ಕಿ?"

"ಹೌದು ಆಗಲೇ ನೀನು ನೋಡಿದ ಹಸಿರು ಹಕ್ಕಿಯ ಹೆಸರು ಕುಟ್ರ. ಅದರ ಪೂರ್ತಿ ಹೆಸರು ದೊಡ್ಡ ಕುಟ್ರ. ಅದರ ಇನ್ನೊಂದು ಪ್ರಭೇದವೂ ಇದೆ–"

"ಆಹ್! ಹಾಗಾದರೆ ಇದು ಕುಟ್ರ ಹಕ್ಕಿ?" ಮತ್ತೆ ಪೊಟರೆ ಒಳಗೆ

ಹಾರಿ ಹೋದ ಹಕ್ಕಿಯನ್ನು ತೋರಿಸುತ್ತಾ ಹೇಳಿದೆ.

“ಹೌದು. ಈ ಹಕ್ಕಿಗಳು ತಮ್ಮ ಕೊಕ್ಕನ್ನು ತೆಗೆದಿಟ್ಟುಕೊಂಡು ಮರಕ್ಕೆ ಗುದ್ದಿ ಗುದ್ದಿ ಗುಂಡಾದ ರಂಧ್ರ ಮಾಡುತ್ತವೆ. ಅದಾದ ನಂತರ ಅವು ಚೇಗನ್ನು ಒಡೆದು ಒಳಗೆ ಗೂಡು ಮಾಡಲು ಸರಿ ಮಾಡಿಕೊಳ್ಳುತ್ತವೆ. ನಮ್ಮಂತೆಯೇ!”

ಹಕ್ಕಿಗಳ ಕೊಕ್ಕಿನ ಬಗ್ಗೆ ಗಮನವನ್ನೇ ಹರಿಸಿರಲಿಲ್ಲ. ಅವು ಬೇರೆ ಬೇರೆ ಆಕಾರ ಮತ್ತು ಗಾತ್ರಗಳಲ್ಲಿ ಇದ್ದರೂ. “ಗಿಳಿಗಳ ಬಾಗಿರುವ ಕೊಕ್ಕನ್ನು ನೋಡಿದರೆ, ಅವು ಮರದಲ್ಲಿ ತೂತು ಮಾಡಲಾರವು, ಆದರೆ ಗೊರವಂಕಗಳು ತೂತು ಮಾಡಬಲ್ಲವೆ?” ನಾನು ಕೇಳಿದೆ.





“ನೀನು ತಪ್ಪು ತಿಳಿದಿದ್ದಿಯ. ಗಿಳಿಗಳು ತಮ್ಮ ಗಾತ್ರಕ್ಕೆ ಸರಿಹೊಂದುವಂತೆ ಪೊಟರೆಯನ್ನು ದೊಡ್ಡದಾಗಿ ಮಾಡಬಲ್ಲವು. ಆದರೆ ಗೊರವಂಕಗಳು ಪೊಟರೆಗಳನ್ನು ಬಂದು ಆಕ್ರಮಿಸಿಕೊಳ್ಳುತ್ತವೆ. ಹಾಗೆ ನೋಡಿದರೆ ಈ ಎರಡು ಹಕ್ಕಿಗಳು ಯಾವ ರೀತಿಯ ತೂತುಗಳಲ್ಲಿ ಬೇಕಾದರೂ ಗೂಡು ಕಟ್ಟಬಹುದು. ಗೋಡೆಯಲ್ಲಿರುವ ತೂತುಗಳಲ್ಲಿ ಸಹ,” ಮರಕುಟಿಗ ಹೇಳಿತು.

“ಅದರ ಅರ್ಥ ಗಿಳಿಗಳು ಮತ್ತು ಗೊರವಂಕಗಳು ಪೊಟರೆಗಳನ್ನು ಕದಿಯುತ್ತವೆಯೆ?” ನಾನು ಕೇಳಿದೆ.

“ಕದಿಯುವ ಪ್ರಶ್ನೆಯೇ ಇಲ್ಲ. ನಮ್ಮೆಲ್ಲರಿಗೂ ಪೊಟರೆಗಳು ಬೇಕು.

ನಾವು ಕೆಲವರು ಅದನ್ನು ಮಾಡುತ್ತೇವೆ... ಕೆಲವರು ಅದನ್ನು ಹುಡುಕಿ ಕೊಳ್ಳುತ್ತಾರೆ. ನಮ್ಮ ಪೊಟರೆಯನ್ನು ಕಾಪಾಡಿಕೊಳ್ಳುವುದು ನಮ್ಮದೇ ಕೆಲಸ," ಎಂದು ಹೇಳಿತು ಮರಕುಟಿಗ ಹಕ್ಕಿ.

ತೋಪು ಈಗ ಶಾಂತವಾಗಿತ್ತು. ಜಗಳ ಮುಗಿದಿತ್ತು. ಗಿಳಿಗಳು ಪೊಟರೆಯನ್ನು ಆಕ್ರಮಿಸಿಕೊಂಡಿದ್ದವು. ನಾನು ಇದನ್ನು ಮರಕುಟಿಗನಿಗೆ ಹೇಳಿದೆ.

"ಇದೇ ಕೊನೆಯೆಂದು ನಂಬಬೇಡ. ಎರಡೂ ಹಕ್ಕಿಗಳು ಅಕ್ರಮಣಕಾರಿಗಳಾಗಿವೆ. ಗಿಳಿಗಳು ಗೆದ್ದವು ಎಂದು ಹೇಳಲು ಆಗಲ್ಲ," ಎಂದು ಹೇಳಿದ ಮರಕುಟಿಗ, ಹೇಗೆ ಗೊರವಂಕಗಳು ಒಮ್ಮೆ ಕುಟ್ರ





ಹಕ್ಕಿಗಳನ್ನು ಅದರ ಪೊಟರೆಯಿಂದ ಓಡಿಸಿದವು ಎಂದು ವಿವರಿಸಿತು.

“ಇದು ಸರಿಯಲ್ಲ,” ನಾನು ಪ್ರತಿಭಟಿಸಿದೆ. ನನಗೆ ಒಂದು ಜಾತಿಯ ಹಕ್ಕಿ, ಇನ್ನೊಂದರ ಮೇಲೆ ಪ್ರಾಬಲ್ಯ ಸಾಧಿಸುವುದು ಇಷ್ಟವಾಗಲಿಲ್ಲ.

“ಸರಿಯಾಗಿಯೇ ಇದೆ.” ಆ ಹಕ್ಕಿ, ಏನೂ ಕಾರಣ ಕೊಡದೆ ಹೇಳಿತು.

ನಾನು ಹಕ್ಕಿಗಳ ಆಕ್ರಮಣಕಾರಿ ನಡತೆಯ ಬಗ್ಗೆ ಯೋಚಿಸುತ್ತಿದ್ದಾಗ ಏನೋ ನನ್ನ ಮುಂದೆ ವೇಗವಾಗಿ ಹಾರಿ ಹೋದಂತೆ ಅನಿಸಿತು.

ಗಾಬರಿಯಿಂದ ಸುತ್ತಲೂ ನೋಡಿದೆ.

“ಮಂಗಟ್ಟೆ ಹಕ್ಕಿ ಹಿಂತಿರುಗಿತು.” ಮರದ ಮೇಲ್ಭಾಗದಲ್ಲಿ ಇದ್ದ ಪೊಟರೆಯನ್ನು ನೋಡುತ್ತಾ ಮರಕುಟಿಗ ಹೇಳಿತು. “ಅವು ಗೂಡಿನ ಹತ್ತಿರ ಇದ್ದಾಗ ನಿಶಬ್ದವಾಗಿ ಇರುತ್ತವೆ. ಆದರೆ ಅವು ಪಕ್ಕದಲ್ಲಿ ಹಾರಿದಾಗ ಜೋರಾಗಿ ರೆಕ್ಕೆಯ ಸದ್ದು ಕೇಳಿಸುತ್ತದೆ.”

“ಮಂಗಟ್ಟೆ ಹಕ್ಕಿ!” ಆ ವಿಚಿತ್ರ ಹಕ್ಕಿಯ ಹೆಸರು ತಿಳಿಯಿತು. ಆದರೆ ಅದು ಅದರ ಹೆಂಡತಿಗೆ ಯಾಕೆ ತಿನ್ನಿಸುತ್ತಿತ್ತು, ಇನ್ನೂ ಅರ್ಥ ಆಗಲಿಲ್ಲ. “ನೀನು ಮಂಗಟ್ಟೆ ಹಕ್ಕಿಯ ಹೆಂಡತಿಯ ಬಗ್ಗೆ ಹೇಳುತ್ತಿದ್ದೆ ಅಲ್ಲವೆ?” ನಾನು ಕೇಳಿದೆ.

“ಹಾ ಹೌದು, ತಾಯಿ ಮಂಗಟ್ಟೆ ಅದರ ಮೊಟ್ಟೆಗಳು ಒಡೆದು ಮರಿಗಳಿಗೆ





ಕೆಲವು ವಾರಗಳು ಆಗುವ ತನಕ ಪೊಟರೆ ಒಳಗಡೆಯೇ ಕುಳಿತಿರುತ್ತದೆ. ಆ ಸಮಯದಲ್ಲಿ ಪೊಟರೆ ಪೂರ್ತಿ ಮುಚ್ಚಿ ಒಂದು ಸಣ್ಣ ಸೀಳನ್ನು ಮಾತ್ರ ಬಿಟ್ಟಿರುತ್ತದೆ. ಅದು ಅಲ್ಲಿ ಒಂದು ತಿಂಗಳಿಗಿಂತ ಹೆಚ್ಚು ಸಮಯ ಇರುತ್ತದೆ. ತಂದೆ ಮಂಗಟ್ಟೆ ಅವಳಿಗೆ ಊಟವನ್ನು ಆ ಸೀಳಿನ ಮೂಲಕ ಕೊಡುತ್ತದೆ," ಎಂದಿತು ಮರಕುಟಿಗ.

ನನಗೆ ಆಶ್ಚರ್ಯವಾಯಿತು.

ಒಂದು ಹಕ್ಕಿ ಕತ್ತಲೆ ಪೊಟರೆಯಲ್ಲಿ ಅಷ್ಟು ಸಮಯ ಕುಳಿತಿರುತ್ತದೆಯೇ? ಇದು ನಿಜವಾಗಿ ವಿಚಿತ್ರವಾದ ಹಕ್ಕಿಯೇ! ಮುಚ್ಚಿದ ಪೊಟರೆ, ಒಂದು ಸಣ್ಣ ಸೀಳು ಮಾತ್ರ ಎಂದರೆ ಇದು ಜೈಲಿನಂತೆಯೇ ಅನಿಸುತ್ತದೆ.

ನನಗೆ ಬೇಜಾರಾಯಿತು. ಇದು ನ್ಯಾಯವೆ? ಅಥವಾ ಅನ್ಯಾಯವೆ? ತಿಳಿಯಲಿಲ್ಲ. ಮರಕುಟಿಗ ಇದನ್ನು ಅನ್ಯಾಯ ಎಂದು ಭಾವಿಸುವುದಿಲ್ಲ ಎಂದು ನನಗೆ ಅನುಮಾನವಿತ್ತು.

"ಅಲ್ಲಿ ನೋಡು!" ಮರಕುಟಿಗ ಕೂಗಿತು.

ಗೊರವಂಕ ಮಂಗಟ್ಟೆ ಹಕ್ಕಿಯ ಮೇಲೆ ಎರಗುತ್ತಾ ಜೋರಾಗಿ ಕಿರುಚುತ್ತಾ ಆಕ್ರಮಣ ಮಾಡುತ್ತಿತ್ತು. ಮೊದಲು ಜಗಳ ಮಾಡುತ್ತಿದ್ದ ಗೊರವಂಕವೇ ಇರಬೇಕು. ತನ್ನ ಸಮತೋಲನ ಕಳೆದುಕೊಂಡ ಮಂಗಟ್ಟೆ ಹಕ್ಕಿ ಹತ್ತಿರದ ಇನ್ನೊಂದು ಕೊಂಬೆಗೆ ಹಿಮ್ಮೆಟ್ಟಿತು. ಆಹಾರ ಕೊಡಲು ಹತ್ತಿರ ಬಂದಾಗಲೆಲ್ಲಾ ಗೊರವಂಕ ಅದನ್ನು ಓಡಿಸುತ್ತಿತ್ತು.





“ಗೊರವಂಕಾ ತುಂಬಾ ಹಠಮಾರಿ ಹಕ್ಕಿ. ಆದರೆ ಮಂಗಟ್ಟೆ ಅದನ್ನು ವಿರೋಧಿಸುತ್ತಿಲ್ಲ!” ನಾನು ಆಶ್ಚರ್ಯದಿಂದ ಹೇಳಿದೆ.

“ಅದೇ, ಅದೇ ತಾನೇ ಜೈಲುವಾಸದ ಗುಟ್ಟು!” ಮರಕುಟಿಗ ಉದ್ಗರಿಸಿತು.

***



ಭೇಟಿ ಮಾಡಿ... ಮರಕುಟಿಗ (ಹೆಮ್ಮರಕುಟಿಗ) Lesser Goldenbacked Woodpecker



ದೊಡ್ಡ ಕುಟ್ರ (ಕಂದು–ತಲೆಯ ಕುಟ್ರ) **Brown-headed Barbet**



ತಂದೆ ಹಾಗು ತಾಯಿ ಗಿಳಿ Father and Mother Roseringed Parakeet



ಗೊರವಂಕ Common Myna



ತಂದೆ ಮಂಗಟ್ಟೆ Father Common Grey Hornbill



**ಪುಟ್ಟ ಮಕ್ಕಳಿಗೆ ಪ್ರಕೃತಿಯ ಕಥೆಗಳು**

ಅನುಕೂಲದ ಆಶ್ರಯ
ಆ ನಿಗೂಢ ಮೊಟ್ಟೆಗಳು
ಯಾರು ಹೆಚ್ಚು ಅದೃಷ್ಟವಂತರು
ಮಾಲಿಕರು ಹಾಗು ಆಕ್ರಮಣಕಾರಿಗಳು
ಇಕ್ಕಟ್ಟಿಗೆ ಸಿಕ್ಕಿದ್ದ ಚಂದ್ರಮುಕುಟ
ಎಲ್ಲಿದ್ದೀಯಪ್ಪಾ ಕಾಪರ್‌ಸ್ಮಿತ್!
ಒಳ್ಳೆಯ ಕೆಲಸ
ತೋರಿಸಿದ ದಾರಿ
ಮಣ್ಣಿನ ಅನುಬಂಧ
ವಿಚಿತ್ರ ಬೇಡಿಕೆ

Vidya Online

A PARTNERSHIP FOR TEACHERS, CHILDREN AND EDUCATION

Visit http://vidyaonline.net for more titles